## ವಾರ್ಡ್ ನಂ: 83 ಕಾಡುಗುಡಿ ವಾರ್ಡ್ ಕಮಿಟಿ ಸಭೆಯ ನಡುವಳಿಗಳು:-

ದಿನಾಂಕ: 04/09/2021 ರಂದು ಕಾಡುಗುಡಿ ವಾರ್ಡ್ ಸಂಖ್ಯೆ: 83 ರ ವ್ಯಾಪ್ತಿಯಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ:ಬಿ12(5)/ಪಿಆರ್/35/2020-21 ದಿನಾಂಕ:21-09-2020 ಆದೇಶದಂತೆ ವಾರ್ಡ್ ಕಛೇರಿಯಲ್ಲಿ ಮಾನ್ಯ ವಾರ್ಡ್ ನೋಡಲ್ ಅಧಿಕಾರಿ, ಕಮಿಟಿಯ ಕಾರ್ಯದರ್ಶಿ, ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರ ಸಮಕ್ಷಮದಲ್ಲಿ ಸಭೆ ನಡೆಸಲಾಯಿತು.

### ಈ ಕೆಳಕಂಡ ಅಧಿಕಾರಿಗಳು ಹಾಗೂ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ

1. ಶ್ರೀ.ಡಿ.ಎಂ.ಮುನಿರೆಡ್ಡಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಎನ್.ವೆಂಕಟೇಶ್, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
3. ಅಕ್ಕಮಹಾದೇವಿ.ಎನ್, ಹಿರಿಯ ಆರೋಗ್ಯ ನಿರೀಕ್ಷಕರರು, ವಾರ್ಡ್ ನಂ:83, ಕಾಡುಗುಡಿ, ಬಿ.ಬಿ.ಎಂ.ಪಿ
4. ಶ್ರೀ.ಸುರೇಶ್, ಕಿರಿಯ ಅಭಿಯಂತರರು, ಬೆಸ್ಕಾಂ
5. ಡಾ॥ ಕಾಂತರಾಜು, ವೈಧ್ಯಾಧಿಕಾರಿಗಳು ಕಾಡುಗುಡಿ ಪ್ರಾರ್ಥಮಿಕ ಆರೋಗ್ಯ ಕೇಂದ್ರ

### ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು

1. ಶ್ರೀ.ಜಗದೀಶ್.ಕೆ,
2. ಹರಿಪ್ರಸಾದ್ ರೆಡ್ಡ
3. ಎಂ.ರವಿ, ಅಂಬೇಡ್ಕರ್‌ಗುಟ್ಟ
4. ಪ್ರದೀಪ್ ರೆಡ್ಡಿ
5. ಹರೀಶ್ ಗೌಡ
6. ವಿನಿತಾ.ಕೆ
7. ತಿಪ್ಪೇಸ್ವಾಮಿ
8. ಅಣ್ಣಯ್ಯ
9. ಶಿವರಾಜು.ಬಿ.ಬಿ.
10. ಬಾಸು
11. ಆನಂದ ರೆಡ್ಡಿ
12. ಶಶಿ
13. ಸತೀಶ್.ಎನ್
14. ನಾನಿ ರೆಡ್ಡಿ
15. ಭರತ್.ಎಸ್

ಸಭೆಯಲ್ಲಿ ಹಾಜರಿದ್ದ ಅಕ್ಕಮಹಾದೇವಿ, ಹಿರಿಯ ಆರೋಗ್ಯ ನಿರೀಕ್ಷಕರು, ರವರು ಸಭೆಯಲ್ಲಿ ಸೇರಿರುವ ನೋಡಲ್ ಅಧಿಕಾರಿಗಳು, ಕಮಿಟಿಯ ಕಾರ್ಯದರ್ಶಿಗಳು, ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು ಉಪಸ್ಥಿತಿಯಲ್ಲಿದ್ದು ಸ್ವಾಗತಾ ಭಾಷಣ ಕೋರಿರುತ್ತಾರೆ.

1. ಸಭೆಯಲ್ಲಿ ಶ್ರೀ.ಮುನಿಂದ್ರ, ದಿನ್ನೂರು ರವರು ಕೋವಿಡ್-19ರ ಲಸಿಕೆ ನೀಡುವ ಬಗ್ಗೆ ದಿನ್ನೂರು ಗ್ರಾಮದ ಪ್ರದೇಶಗಳಿಗೆ ತಂಡವನ್ನು ಕಳುಹಿಸಿಕೊಡಲು ಕೋರಿರುತ್ತಾರೆ.
   - ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಅಕ್ಕಮಹಾದೇವಿ, ಹಿರಿಯ ಆರೋಗ್ಯ ನಿರೀಕ್ಷಕರು, ರವರು ದಿನ್ನೂರು ಗ್ರಾಮಕ್ಕೆ ಬೇಟಿ ನೀಡುವ ಮೊದಲು ಪ್ರದೇಶದಲ್ಲಿ ಕನಿಷ್ಠ ಪಕ್ಷ 50-100 ಕೋವಿಡ್-19ರ ಲಸಿಕೆ ಹಾಕಿಸಿಕೊಳ್ಳುವ ಜನ ಲಭ್ಯವಿರುವ ಬಗ್ಗೆ ಮಾಹಿತಿ ನೀಡಬೇಕೆಂದು ಸೂಚಿಸಿರುತ್ತಾರೆ. ಸದರಿ ವಿಷಯಕ್ಕೆ ಶ್ರೀ.ಮುನಿಂದ್ರ, ರವರು ಒಪ್ಪಿರುತ್ತಾರೆ. ಹಾಗೂ ನೋಡಲ್ ಅಧಿಕಾರಿಗಳು ಮಾಹಿತಿ ನೀಡಿದ್ದಲ್ಲಿ ಕೂಡಲೇ ಪ್ರದೇಶಕ್ಕೆ ಕೋವಿಡ್-19ರ ಲಸಿಕೆ ನೀಡುವ ಸರ್ಕಾರಿ ಆಸ್ಪತ್ರೆಯ ತಂಡವನ್ನು ಕಳುಹಿಸಲು ಒಪ್ಪಿರುತ್ತಾರೆ.

2. ಸಭೆಯಲ್ಲಿ ಶ್ರೀ.ಶಿವು ರವರು ಎ.ಕೆ.ಜಿ ಕಾಲೋನಿಯ ರಸ್ತೆಗಳು ತುಂಬಾ ಹದಗೆಟ್ಟಿದ್ದು, ರಸ್ತೆಯಲ್ಲಿ ಮಣ್ಣು ಸಮತಟ್ಟು ಮಾಡುವ ಬಗ್ಗೆ ಕೋರಿರುತ್ತಾರೆ.
   - ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ ಸೂಚಿಸಿ, ರಸ್ತೆಗಳಲ್ಲಿನ ಮಣ್ಣನ್ನು ಸಮತಟ್ಟು ಮಾಡುವುದಾಗಿ ವಾರ್ಡ್ ಅಭಿಯಂತರರು, ತಿಳಿಸಿರುತ್ತಾರೆ.

3. ಸಭೆಯಲ್ಲಿ ಶ್ರೀಮತಿ.ಮಾಲತಿ ರೆಡ್ಡಿ, ರವರು ವೈಟ್‌ರೋಜ್ ಬಡಾವಣೆಯ 4 ಮತ್ತು 5ನೇ ಅಡ್ಡ ರಸ್ತೆಯಲ್ಲಿ, ರಸ್ತೆ ಮತ್ತು ಚರಂಡಿ ಹಾಳಾಗಿದ್ದು, ಕೂಡಲೇ ಸದರಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ, ಅನುಮೋದನೆಗಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸಿ, ಕಾಮಗಾರಿಯನ್ನು ಶೀಘ್ರದಲ್ಲಿ ಪ್ರಾರಂಭಿಸಲು ಕೋರಿರುತ್ತಾರೆ.
   - ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ನೋಡಲ್ ಅಧಿಕಾರಿ ರವರು ವಾರ್ಡ್ ಅಭಿಯಂತರರಿಗೆ, ಕೂಡಲೇ ಅಂದಾಜು ಪಟ್ಟಿಯನ್ನು ತಯಾರಿಸಿ, ಮೇಲಾಧಿಕಾರಿಗಳಿಗೆ ಸಲ್ಲಿಸಲು ತಿಳಿಸಿರುತ್ತಾರೆ.

4. ಸಭೆಯಲ್ಲಿ ಸಾರ್ವಜನಿಕರು ಡಿ-ಸಿಲ್ವಾ ಬಡಾವಣೆಯ ಸಿಂದು-ಬೈರವಿ ರಸ್ತೆಯ ಚರಂಡಿಯಲ್ಲಿ ಹೂಳು ತೆಗೆದು, ಸರಾಗವಾಗಿ ನೀರು ಹರಿಯುವಂತೆ ಮಾಡಲು ಕೋರಿರುತ್ತಾರೆ.
   - ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಆಧ್ಯತೆಯ ಮೇರೆಗೆ ಕಾಮಗಾರಿ ನಿರ್ವಹಿಸಲಾಗುವುದು ಎಂದು ವಾರ್ಡ್ ಅಭಿಯಂತರರು, ತಿಳಿಸಿರುತ್ತಾರೆ.

5. ಸಭೆಯಲ್ಲಿ ಒಳಚರಂಡಿಗೆ ಸಂಬಂಧಿಸಿದಂತೆ ಶ್ರೀ.ಹರಿಪ್ರಸಾದ್ ರವರು ಎ.ಕೆ.ಜಿ ಕಾಲೋನಿಯಲ್ಲಿ ಮ್ಯಾನ್ ಹೋಲ್ ಚೇಬರ್ ಮತ್ತು ಜೋಡಣೆ ಪೈಪ್‌ಗಳನ್ನು ಶ್ರೀಘ್ರವಾಗಿ ಅಳವಡಿಸಲು ಕೋರಿರುತ್ತಾರೆ.
   - ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ನೋಡಲ್ ಅಧಿಕಾರಿ ರವರು ಸದರಿ ಕಾಮಗಾರಿ ಬಗ್ಗೆ ಪ್ರಾಜೆಕ್ಟ್ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರಿಗೆ ತಿಳಿಸಲು ವಾರ್ಡ್ ಅಭಿಯಂತರರಿಗೆ ಸೂಚಿಸಿರುತ್ತಾರೆ.

6. ಸಭೆಯಲ್ಲಿ ಶ್ರೀ.ಹರಿಪ್ರಸಾದ್ ರವರು ಎ.ಕೆ.ಜಿ ಕಾಲೋನಿಯಲ್ಲಿ ಕೋವಿಡ್-19ರ ಲಸಿಕೆ ಪಡೆಯುವ ಸಾರ್ವಜನಿಕರು ಅನೇಕರಿದ್ದು, ಕೂಡಲೇ ಕಾರ್ಯಕ್ರಮವನ್ನು ಕೈಗೊಳ್ಳಲು ಕೋರಿರುತ್ತಾರೆ.
   - ಸದರಿ ವಿಷಯಕ್ಕೆ ಸಂಬಂಧಪ್ಪಂತೆ ಅಕ್ಕಮಹಾದೇವಿ, ಹಿರಿಯ ಆರೋಗ್ಯ ನಿರೀಕ್ಷಕರು, ರವರು ಎ.ಕೆ.ಜಿ ಕಾಲೋನಿಯಲ್ಲಿ ಕೋವಿಡ್-19ರ ಲಸಿಕೆ ನೀಡಲು ಲಭ್ಯವಿರುವ ಸಾರ್ವಜನಿಕರ ಮಾಹಿತಿ ನೀಡಿದ್ದಲ್ಲಿ ಸರ್ಕಾರಿ ಆಸ್ಪತ್ರೆಯ ತಂಡವನ್ನು ಕೂಡಲೇ ಕಳುಹಿಸಲು ಒಪ್ಪಿರುತ್ತಾರೆ.

7. ಸಭೆಯಲ್ಲಿ ಸಾರ್ವಜನಿಕರು ವಾರ್ಡ್ ರಸ್ತೆಗಳಲ್ಲಿ ವಿದ್ಯುತ್ ಸೋಡಿಯಂ ಬೀದಿ ದೀಪಗಳನ್ನು ಬದಲಿಸಿ, ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸಲು ಕೋರಿರುತ್ತಾರೆ.
   - ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ನೋಡಲ್ ಅಧಿಕಾರಿ ರವರು ಪ್ರಸ್ತುತ ಇರುವ ಬೀದಿ ದೀಪಗಳ ರಿಪೇರಿ ಕಾಮಗಾರಿಯ ಕೆಲಸವನ್ನು ಬಿಬಿಎಂಪಿ ಯಿಂದ ನಿರ್ವಹಿಸುತ್ತಿದ್ದು, ಹೊಸದಾಗಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸುವ ಕುರಿತಾಗಿ ಪ್ರಸ್ತಾವನೆ ಸರ್ಕಾರ ಮಟ್ಟದಲ್ಲಿ ಇರುವುದಾಗಿ ತಿಳಿಸಿರುತ್ತಾರೆ.

8. ಸಭೆಯಲ್ಲಿ ಶ್ರೀ.ಪುರುಷೋತಮ್ ರವರು ಪ್ರಶಾಂತ್ ಬಡಾವಣೆಯ ರಸ್ತೆಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಅಗೆದಿರುವ ರಸ್ತೆಯ ಭಾಗವನ್ನು ಈ ಕೂಡಲೇ ಪುನರ್‌ಸ್ಥಾಪನೆ ಮಾಡಲು ಕೋರಿರುತ್ತಾರೆ.
   - ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ನೋಡಲ್ ಅಧಿಕಾರಿ ರವರು ಪ್ರಸ್ತುತ ಸರ್ಕಾರದಿಂದ 110 ಹಳ್ಳಿಗಳ ರೆಸ್ಟೋರೇಷನ್ ಮಾಡಲು ಅನುದಾನವನ್ನು ಬಿಡುಗಡೆ ಮಾಡಿದ್ದು, ಸಿ.ಎಂ.ಸಿ ಪ್ರದೇಶಗಳಿಗೆ ಸರ್ಕಾರದಿಂದ ಅನುದಾನವು ಬಿಡುಗಡೆಯಾಗಿರುವುದಿಲ್ಲ. ಆದುದರಿಂದ ಪ್ರಶಾಂತ್ ಬಡಾವಣೆಯು ಸಿ.ಎಂ.ಸಿ ಪ್ರದೇಶಕ್ಕೆ ಒಳಪಟ್ಟಿರುವುದರಿಂದ ಪುನರ್‌ಸ್ಥಾಪನೆಯ ಕಾಮಗಾರಿಯನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದಲೇ ನಿರ್ವಹಿಸಬೇಕೆಂದು ತಿಳಿಸಿರುತ್ತಾರೆ.

9. ಸಭೆಯಲ್ಲಿ ಶ್ರೀ.ರವಿ, ಅಂಬೇಡ್ಕರ್‌ಗುಟ್ಟ ರವರು ಪಾಲಿಕೆ ವತಿಯಿಂದ ನಿರ್ವಹಿಸುತ್ತಿರುವ ಕಾಮಗಾರಿಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಲು ಕೋರಿರುತ್ತಾರೆ.
   - ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ವಾರ್ಡ್ ಅಭಿಯಂತರರು, ಗುತ್ತಿಗೆದಾರರಿಗೆ ಕಾಮಗಾರಿಯನ್ನು ಶ್ರೀಘ್ರವಾಗಿ ಪೂರ್ಣಗೊಳಿಸಲು ಈಗಾಗಲೇ ಸೂಚಿಸಿರುವುದಾಗಿ ತಿಳಿಸಿರುತ್ತಾರೆ.

10. ಸಭೆಯಲ್ಲಿ ಸಾರ್ವಜನಿಕರು ಡಿ-ಸಿಲ್ವಾ ರಸ್ತೆಯಲ್ಲಿ ಕಸ ತೆರವುಗೊಳಿಸದಿರುವುದನ್ನು ಕಂಡಿಸಿ, ದೂರನ್ನು ಪ್ರಸ್ತಾಪಿಸಿರುತ್ತಾರೆ.
   - ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಅಕ್ಕಮಹಾದೇವಿ, ಹಿರಿಯ ಆರೋಗ್ಯ ನಿರೀಕ್ಷಕರು, ರವರು ಕೂಡಲೇ ಕಸ ತೆರವುಗೊಳಿಸುವುದಾಗಿ ತಿಳಿಸಿರುತ್ತಾರೆ.

11. ಸಭೆಯಲ್ಲಿ ಶ್ರೀ.ರವಿ, ಅಂಬೇಡ್ಕರ್‌ಗುಟ್ಟ ರವರು ವಾರ್ಡ್‌ಗೆ ಸಂಬಂಧಪಟ್ಟ ಮೊದಲನೇ ಹಂತದ ಒಂಟಿ ಮನೆಗಳನ್ನು ನಿರ್ಮಿಸಿರುವ ಬಿಲ್ಲುಗಳನ್ನು ತಯಾರಿಸಿ, ಬಿಲ್‌ಗಳ ಪಾವತಿಗಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸಬೇಕೆಂದು ಕೋರಿರುತ್ತಾರೆ.
   - ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ವಾರ್ಡ್ ಅಭಿಯಂತರರು ಬಿಲ್ಲುಗಳನ್ನು ತಯಾರಿಸಿ, ಮೇಲಾಧಿಕಾರಿಗಳಿಗೆ ಸಲ್ಲಿಸಲು ಪ್ರಗತಿಯಲ್ಲಿ ಇರುವುದಾಗಿ ತಿಳಿಸಿರುತ್ತಾರೆ.

12. ಸಭೆಯಲ್ಲಿ ಶ್ರೀ.ಹನುಮಾನ್ ಬಾಬು ರವರು ಎ.ಕೆ.ಜಿ ಕಾಲೋನಿಯಲ್ಲಿ ನೀರಿನ ಅಭಾವ ಹೆಚ್ಚಾಗಿದ್ದು, ಕುಡಿಯುವ ನೀರಿನ ಪೈಪ್‌ಗಳನ್ನು ಅಳವಡಿಸಿ, ನೀರು ಸರಬರಾಜು ಮಾಡಬೇಕಾಗಿ ಕೋರಿರುತ್ತಾರೆ.
   - ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ವಾರ್ಡ್ ಅಭಿಯಂತರರು ಜರೂರಾಗಿ ಪೈಪ್‌ಗಳನ್ನು ಅಳವಡಿಸಲು ಗುತ್ತಿಗೆದಾರರಿಗೆ ಸೂಚಿಸುವುದಾಗಿ ತಿಳಿಸಿರುತ್ತಾರೆ.

13. ಸಭೆಯಲ್ಲಿ ನೋಡಲ್ ಅಧಿಕಾರಿ ರವರು ಬಿ.ಬಿ.ಎಂ.ಪಿ ಯ Animal husbandry, Forest Department, SWM, Lakes, Major Roads, Revenue, ಹಾಗೂ BWSSB, BSNL & Police Department ಇಲಾಖೆಗಳಿಂದ ಅಧಿಕಾರಿಗಳು ಗೈರು ಹಾಜರಾಗಿದ್ದು, ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ಸದರಿಯವರಿಗೆ ತಿಳಿಸಲು ವಾರ್ಡ್ ಕಾರ್ಯದರ್ಶಿ ರವರಿಗೆ ಸೂಚಿಸಿರುತ್ತಾರೆ.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

8/9/2021

**(ಎನ್.ವೆಂಕಟೇಶ್)**
**ಸಹಾಯಕ ಅಭಿಯಂತರರು ಹಾಗೂ**
**ವಾರ್ಡ್ ಕಮಿಟಿ ಕಾರ್ಯದರ್ಶಿ**
**ವಾರ್ಡ್ ನಂ: 83 ಕಾಡುಗುಡಿ**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ